ಓ.ಎಸ್. ನಂ. 179/2012

ಪಿ.ಡಬ್ಲ್ಯು: 02 (ರಾಜಣ್ಣ)

ದಿನಾಂಕಃ 12.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ – ಶ್ರೀ ಆರ್ ಆರ್ ವಕೀಲರಿಂದ.

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಈ ದಾವೆಯ ವಂಶವೃಕ್ಷ ಹಾಗೂ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಆಸ್ತಿಗಳ ಮೂಲ ಪುರುಷ ಮಾರಯ್ಯ. ಮಾರಯ್ಯನಿಗೆ 3 ಜನ ಮಕ್ಕಳು, ಅವರುಗಳು ಪಾಲಯ್ಯ, ಓಬಯ್ಯ ಮತ್ತು ಬೋರಯ್ಯ. ಸದರಿಯವರು ಪಾಲು ವಿಭಾಗ ಆಗಿದ್ದಾರೆ, ಆದರೆ ಅದರ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ. ಸರ್ವೆ ನಂಬರ್ 105 ರಲ್ಲಿ ತಲಾ ಒಂದು ಭಾಗ ಮಾಡಿಕೊಂಡಿರುತ್ತಾರೆ. ಅಂದರೆ ತಲಾ 8 ½ ಎಕರೆ ತೆಗೆದುಕೊಂಡಿರುತ್ತಾರೆ. ಈ ಬಗ್ಗೆ ನನಗೆ ಪಹಣಿ ಪತ್ರಗಳನ್ನು ನೋಡಿದಾಗ ತಿಳಿದು ಬಂತು. ನಾನು ನನ್ನ ಚಿಕ್ಕಪ್ಪನಾದ ಪಾಲಯ್ಯರವರ ವಿರುದ್ಧ ಈ ದಾವೆಯನ್ನು 17.35 ಎಕರೆಗೆ ಹೂಡಿರುತ್ತೇನೆ. ಬೊಮ್ಮಕ್ಕ ಓಬಯ್ಯನ ಹೆಂಡತಿ.

ನನ್ನ ಅಜ್ಜ ಬೋರಯ್ಯನ ಅಣ್ಣನಾದ ಓಬಯ್ಯನಿಗೆ ಸರ್ವೆ ನಂಬರ್ 105 ರಲ್ಲಿ 8 ½ ಎಕರೆ ಬಂದಿದೆ. ಅವರ ಅಥವಾ ಅವರ ವಾರಸುದಾರರ ಹೆಸರಿಗೆ ಸದರಿ 8 ½ ಎಕರೆಗೆ ಪಹಣಿ ಇರುವ ಬಗ್ಗೆ ನಾನು ನೋಡಿರುವುದಿಲ್ಲ. ನನ್ನ ಅಜ್ಜ ಬೋರಯ್ಯನ ಅಣ್ಣನಾದ ಓಬಯ್ಯನಿಗೆ ಬಂದ ಆಸ್ತಿಯಲ್ಲಿ ನಾನು ಪಾಲು ಕೇಳುತ್ತಿಲ್ಲ. ಏಕೆಂದರೆ ಅವರಿಗೂ ನಮಗೆ ಸಂಬಂಧ ಇಲ್ಲ. ಅದೇ ರೀತಿ ನನ್ನ ಅಜ್ಜ ಬೋರಯ್ಯನ ಅಣ್ಣನಾದ ಓಬಯ್ಯನ ವಾರಸುದಾರರ ಹೆಸರಿಗೆ ಇರುವ ಪಹಣಿ ಪತ್ರಿಕೆಯ ಆಸ್ತಿಗಳಲ್ಲಿ ನಾನು ಯಾವುದೇ ಪಾಲು ವಿಭಾಗ ಕೇಳುವುದಿಲ್ಲ. ದಾವಾ ಆಸ್ತಿಯ ಯಾವ ದಿಕ್ಕಿಗೆ ಓಬಯ್ಯನ ಮಗ ಓಬಯ್ಯನ ಮತ್ತು ಪಾಲಯ್ಯರವರ ಆಸ್ತಿ ಬರುತ್ತದೆ ಎಂದರೆ ನಡು ಮಧ್ಯಕ್ಕೆ ಬರುತ್ತದೆ.

ಸದರಿ ನಡು ಮಧ್ಯದ ಆಸ್ತಿಯನ್ನು ದಾಟಿದ ನಂತರ ಬೋರಯ್ಯನ ಆಸ್ತಿ ಬರುತ್ತದೆ ಎಂದರೆ ಹೌದು.

ಮಾರಯ್ಯನ ಮಗ ಪಾಲಯ್ಯನ ಆಸ್ತಿಯ ಚೆಕ್‌ಬಂದಿ ಪೂರ್ವಕ್ಕೆ ಹೊಟ್ಟೆ ಈರಜ್ಜನ ಆಸ್ತಿ, ಪಶ್ಚಿಮಕ್ಕೆ ಕೊಟ್ಟಿಗೆ ನಿಂಗಜ್ಜ, ಉತ್ತರಕ್ಕೆ ಉಗ್ಗರಾಜ, ದಕ್ಷಿಣಕ್ಕೆ ಕೊಟ್ಟಿಗೆ ನಿಂಗಪ್ಪನ ಆಸ್ತಿ ಬರುತ್ತದೆ.

ನನ್ನ ತಾತ ಬೋರಯ್ಯ ಪಾಲು ವಿಭಾಗದಲ್ಲಿ ಪಡೆದ ಆಸ್ತಿಯ ಚೆಕ್‌ಬಂದಿ ಅದೇ ಆಗಿರುತ್ತದೆ. ದಾನ ಪತ್ರದ ಆಸ್ತಿಯ ಚೆಕ್‌ಬಂದಿ ಮೇಲೆ ಹೇಳಿದ ಚೆಕ್‌ಬಂದಿಯೇ ಆಗಿರುತ್ತದೆ. ಇದೇ ಚೆಕ್‌ಬಂದಿ ದಾನಪತ್ರದಲ್ಲಿ ಬರೆದಿರುತ್ತದೆಯೇ ಎಂದರೆ ನನಗೆ ಓದಲು ಬರೆಯಲು ಬರುವುದಿಲ್ಲ. ವಕೀಲರಿಂದ ದಾನಪತ್ರದಲ್ಲಿ ಚೆಕ್‌ಬಂದಿ ತಿಳಿದುಕೊಂಡಿರುವುದಿಲ್ಲ.

ಓ.ಎಸ್. ನಂ. 179/2012

ಪಿ.ಡಬ್ಲ್ಯು: 02 (ರಾಜಣ್ಣ)

ನನ್ನ ತಾತ ಬೋರಯ್ಯನ ಪಾಲಿಗೆ ಬಂದ ಆಸ್ತಿಯ ಚೆಕ್‌ಬಂದಿ ಪೂರ್ವಕ್ಕೆ ಹೊಟ್ಟೆ ಈರಜ್ಜನ ಆಸ್ತಿ, ಪಶ್ಚಿಮಕ್ಕೆ ಕೊಟ್ಟಿಗೆ ನಿಂಗಜ್ಜ, ಉತ್ತರಕ್ಕೆ ಉಗ್ಗರಾಜ, ದಕ್ಷಿಣಕ್ಕೆ ಕೊಟ್ಟಿಗೆ ನಿಂಗಪ್ಪನ ಆಸ್ತಿ ಬರುತ್ತದೆ.

ದಾನ ಪತ್ರದಲ್ಲಿ ಓಬಯ್ಯನ ಆಸ್ತಿ ನಡು ಮಧ್ಯದಲ್ಲಿ ಬರುತ್ತದೆ ಎಂದು ಚೆಕ್‌ಬಂದಿಯಲ್ಲಿ ತೋರಿಸಲಾಗಿದೆ. ದಾವಾ ಆಸ್ತಿಯ ಚೆಕ್‌ಬಂದಿಯಲ್ಲಿ ಓಬಯ್ಯನ ಆಸ್ತಿಯನ್ನು ಯಾವ ದಿಕ್ಕಿಗೂ ಕಾಣಿಸಿರುವುದಿಲ್ಲ ಎಂದರೆ ಅದು ನಡು ಮಧ್ಯದಲ್ಲಿ ಇದೆ. ನನ್ನ ಅಜ್ಜಯ್ಯ ಬೋರಯ್ಯನ ಅಣ್ಣನಾದ ಓಬಯ್ಯನ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಹೌದು.

ಉಳಿದ ಪ್ರತಿವಾದಿ ಪರ ವಕೀಲರು ಗೈರು ಹಾಜರು ಇದ್ದು, ಅವರ ಪರ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.